# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 78 & 79
2. ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ
3. ಉತ್ತರಿಸಬೇಕಾದ ದಿನಾಂಕ : 09-07-2018

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಅ | ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೇಮಾವತಿ ಹಿನ್ನೀರಿನ ಮುಳುಗಡೆ ಪ್ರದೇಶದಲ್ಲಿ ಬರುವ ಈಚಲಪುರ ಮತ್ತು ಕ್ಲಾತೆ ಗ್ರಾಮದ ಸಂಪರ್ಕ ರಸ್ತೆ ಹಾಗೂ ಮಲ್ಲಿಕಾರ್ಜುನ ದೇವಸ್ಥಾನದಿಂದ ಊರುಗುತ್ತಿಗೆ ಹೋಗುವ ರಸ್ತೆಯು ತುಂಬಾ ಹಾಳಾಗಿರುವುದರಿಂದ ಸದರಿ ರಸ್ತೆಯ ಮೂಲಕವೇ ಮೊರಾರ್ಜಿ ದೇಸಾಯಿ ಶಾಲೆಗೆ ಓಡಾಡುವ ಮಕ್ಕಳು ಹಾಗೂ ಪೋಷಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ ಸದರಿ ರಸ್ತೆಯನ್ನು ವಿಶೇಷ ರಸ್ತೆಯೆಂದು ಪರಿಗಣಿಸಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಕಾಂಕ್ರೀಟ್ ರಸ್ತೆಯನ್ನಾಗಿ ಮಾರ್ಪಡಿಸಿ ಸಾರ್ವಜನಿಕರಿಗೆ ಆಗಿರುವ ತೊಂದರೆಯನ್ನು ನಿವಾರಿಸಲಾಗುವುದೇ? | ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೇಮಾವತಿ ಹಿನ್ನೀರಿನಲ್ಲಿ ಬರುವ ಕ್ಯಾತೆ ಗ್ರಾಮದ ನಿವಾಸಿಗಳ ಜಮೀನು ಹೇಮಾವತಿ ಜಲಾಶಯದ ನಿರ್ಮಾಣದಿಂದಾಗಿ ಮುಳುಗಡೆಯಾಗಿರುತ್ತದೆ. ಈ ಪ್ರದೇಶದಲ್ಲಿನ ಈಚಲಪುರ ಮತ್ತು ಕ್ಯಾತೆ ಗ್ರಾಮದ ರಸ್ತೆಯು 1.5 ಕಿ.ಮೀ ಉದ್ದವಿದ್ದು, 2011-12 ನೇ ಸಾಲಿನಲ್ಲಿ ಜೆಲ್ಲಿ ರಸ್ತೆಯನ್ನು ನಿರ್ವಹಿಸಲಾಗಿರುತ್ತದೆ.<br><br>ಅದೇ ರೀತಿ ಕೊಡುಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಬರುವ ಊರುಗುತ್ತಿ ಗ್ರಾಮದ ನಿವಾಸಿಗಳ ಜಮೀನು ಹೇಮಾವತಿ ಜಲಾಶಯದ ನಿರ್ಮಾಣದಿಂದಾಗಿ ಮುಳುಗಡೆಯಾಗಿರುತ್ತದೆ. ಈ ಪ್ರದೇಶದಲ್ಲಿನ ಮಲ್ಲಿಕಾರ್ಜುನ ದೇವಸ್ಥಾನದಿಂದ ಊರುಗುತ್ತಿ ಗ್ರಾಮದ ಕಡೆಗೆ ಹೋಗುವ ರಸ್ತೆಯು ಸುಮಾರು 1.5 ಕಿ.ಮೀ. ಉದ್ದವಿದ್ದು 2012-13 ನೇ ಸಾಲಿನಲ್ಲಿ ಜೆಲ್ಲಿ ರಸ್ತೆಯನ್ನು ನಿರ್ವಹಿಸಲಾಗಿರುತ್ತದೆ.<br><br>ಮೇಲ್ಕಂಡ 2 ರಸ್ತೆಗಳು ಮಲೆನಾಡಿನ ಭಾಗದಲ್ಲಿ ಬರುತ್ತಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶವಾಗಿರುವುದರಿಂದ ಜೆಲ್ಲಿ ರಸ್ತೆಯು ಅಲ್ಲಲ್ಲಿ ಗುಂಡಿಬಿದ್ದಿರುತ್ತವೆ. 2018-19ನೇ ಸಾಲಿನ ಅನುದಾನದ ಲಭ್ಯತೆಯನ್ನು ಆಧರಿಸಿ ಸದರಿ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. |

*ಸಂಖ್ಯೆ:ಜಸಂಇ 41 ಎನ್‌ಎಲ್‌ಎ 2018*

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು